

**talk to me'** ಅಲಕಾಳ ಸಾಂತ್ವನ.

**'It's nothing, dear! He is busy with his office work.'**

'ಇಲ್ಲಮ್ಮ! ಪಪ್ಪನಿಗೆ ಏನೋ ಆಗಿದೆ. ಹೇಗಿರಬೇಕೋ ಹಾಗಿಲ್ಲ ಪಪ್ಪ.' ಅಲಕಾಳಿಗೆ ಏನು ಹೇಳಬೇಕೆಂದೇ ತಿಳಿಯಲಿಲ್ಲ. 'ಏನಿಲ್ಲ, ಬಿಡು. ಟೇಬಲ್ ಮೇಲೆ ಸ್ನ್ಯಾಕ್ ಇಟ್ಟಿದ್ದೀನಿ. ಹೋಗು' ಎನ್ನುತ್ತ ಮಗನನ್ನು ಒಳಗೆ ಸಾಗಹಾಕಿದಳು...

'ಈ ಸ್ಥಿತಿ ಎಷ್ಟು ದಿನ ಮುಂದುವರೆಯುವುದೋ, ಗೊತ್ತಿಲ್ಲ, ಅಲಕಾ!' ಎಂದು ನಿಟ್ಟುಸಿರು ಬಿಟ್ಟ.

ಆ ರಾತ್ರಿ ಪರಿಚಯದ ಗೆಳೆಯರೊಬ್ಬರು ಸತೀಶನನ್ನು ಮನೆಯ ಬಾಗಿಲವರೆಗೆ ತಂದು ಬಿಟ್ಟಿದ್ದರು. ಕುಡಿದಿದ್ದು ಹೆಚ್ಚಾಗಿರಬೇಕು. ಆಗಂತುಕರ ನೆರವಿನಿಂದ ಅಲಕಾ ಆತನನ್ನು ಬೆಡ್ರೂಮಿನತ್ತ ಸಾಗಿಸಿದಳು. ರಾತ್ರಿ ಬಹು ಹೊತ್ತಿನವರೆಗೆ ಅವರ ರೂಮಿನಲ್ಲಿ ದೀಪ ಉರಿಯುತ್ತಿತ್ತು.

★★★

ಬೆಳಿಗ್ಗೆ ಸತೀಶ ತಡವಾಗಿ ಎದ್ದ. ಮುಖ ಊದಿಕೊಂಡಂತಿತ್ತು. ಕಣ್ಣುಗಳು ಕೆಂಪಡರಿದ್ದವು. ಆತನನ್ನೇ ದಿಟ್ಟಿಸಿದ ಅಲಕಾ 'ಕುಡಿಯೋದರಿಂದ ಸಮಸ್ಯೆಗೆ ಪರಿಹಾರ ಸಿಗೋದಿಲ್ಲ' ಎಂದಳು. ಆತ ಉದ್ವಿಗ್ನನಾಗಿದ್ದ. 'ಇದು ತಕ್ಷಣ ಮುಗಿಯುವಂತದಲ್ಲ, ಅಲಕಾ! ರಿಸೆಶನ್ ಭೂತ ಇಡೀ ದೇಶವನ್ನೇ ಆವರಿಸಿದೆ. ಕಾರ್ ಇಂಡಸ್ಟ್ರಿ ನೆಲ ಕಚ್ಚಿದೆ. ಇನ್ನು ಸ್ಪೇರ್ ಪಾರ್ಟ್ ಕಂಪೆನಿಗಳ ಗತಿ ಹರೋಹರ.' ಆತನಾಡಿದ ಪ್ರತಿಯೊಂದು ಪದದಲ್ಲಿ ನಿರಾಸೆ ಕುಣಿಯುತ್ತಿತ್ತು.

ಇದ್ದಕ್ಕಿದ್ದ ಹಾಗೆ ಸತೀಶ ಹೇಳಿದ: 'ಅಲಕಾ! ಇದನ್ನೆಲ್ಲ ಇಲ್ಲೇ ಬಿಟ್ಟು ಇಂಡಿಯಾಕ್ಕೆ ಹೋಗಿಬಿಡೋಣ. ಹೇಗೂ ಸ್ವಂತ ಮನೆ ಇದೆ. ಅಪ್ಪನ ನೆರವು ಕೂಡ ಸಿಗಬಹುದು. ಅಲ್ಲೇ ಏನಾದರೂ ದಾರಿ ಸಿಗ್ತದೋ, ನೋಡೋಣ.'

**'Impossible!** ನಾನಂತೂ ಬರೋದಿಲ್ಲ. ಅಪ್ಪ, ಅಮ್ಮ, ನೆಂಟರಿಷ್ಟರು ಏನಂತ ಭಾವಿಸಬಹುದು? ನಾನು ಏನಂತ ಹೇಳ್ಬೇಕು ಅವ್ರಿಗೆ? ಮಾಡ್ಲಿಕ್ಕೆ ಕೆಲಸ ಇರಲಿಲ್ಲ ಅಂತ ಹೇಳಲಾ? ಹಾಗೆ ಸೋತು ಹೋಗ್ಲಿಕ್ಕೆ ನನಗಂತೂ ಇಷ್ಟವಿಲ್ಲ. ಹೋಗ್ಬೇಕಂತ ನಿಮಗನಿಸಿದ್ರೆ ನೀವು ಹೋಗಿ. ನಾನಂತೂ ಖಂಡಿತ ಬರೋದಿಲ್ಲ. ನನ್ನ ವಿಷಯ ಬಿಡಿ. ನಿಮ್ಮ ಮಕ್ಕಳೇ ನಿಮ್ಮ ಜೊತೆಗೆ ಅಲ್ಲಿ ಬರೋದಕ್ಕೆ ತಯಾರಾಗ್ತಾರೋ ನೋಡಿ.'

'ನನ್ನ ಫೀಲ್ಡಲ್ಲಿ ಇರುವಷ್ಟು ಅನ್‌ಸರ್ಟಂಟಿ ಇನ್ನು ಯಾವ ಫೀಲ್ಡಲ್ಲೂ ಇಲ್ಲ, ಅಲಕಾ! ಅದ್ಯಾವಾಗ ಚೇತರಿಸಿಕೊಳ್ತದೋ ನಾ ಕಾಣೆ. ಅಲ್ಲಿಯವರೆಗೆ ನಾನೇನು ಮಾಡೋದು?'

'ಹಾಗಂತ ಇಲ್ಲಿಂದ ಓಡಿ ಹೋಗೋದಾ? **We must fight out, Sateesh!'**

ಸತೀಶ ಟೀ ಕುಡಿಯುತ್ತ ಯೋಚನೆಯಲ್ಲಿ ಮುಳುಗಿದ.

★★★

ಇದ್ದಕ್ಕಿದ್ದ ಹಾಗೆ ಮಗ ಇಂಡಿಯಾಕ್ಕೆ ಬರಲಿರುವ ವಿಚಾರ ತಿಳಿಸಿದಾಗ ಶ್ರೀಕಂಠಯ್ಯನವರಿಗೆ ಆಶ್ಚರ್ಯ. ಆತ ಬಂದು ಇನ್ನೂ ಒಂದು ವರ್ಷ ಕೂಡ ಆಗಿಲ್ಲ. ಮತ್ತೆ ಬರುತ್ತಿದ್ದಾನೆ ಎಂದರೆ ಏನರ್ಥ? ಕಳೆದ ಒಂಬತ್ತು ವರ್ಷಗಳಲ್ಲಿ ಆತ ಮನೆಗೆ ಬಂದದ್ದು ಎರಡು ಬಾರಿ. ಮೊದಲನೆಯ ಬಾರಿ ತನ್ನ ನವವಧುವಿನೊಂದಿಗೆ ಬಂದಿದ್ದ ರಿಸೆಪ್ಷನ್‌ಗಾಗಿ, ಅಂದರೆ, ತಾನೇ ವ್ಯವಸ್ಥೆಗೊಳಿಸಿದ ಆರತಕ್ಷತೆಗಾಗಿ. ಅಮೆರಿಕದಿಂದ ಆತನ ಅತ್ತೆ, ಮಾವ ಮತ್ತೆ ಹಿಮಾಚಲ ಪ್ರದೇಶದ ಒಂದಷ್ಟು ಜನ ನೇರವಾಗಿ ಬಂದಿಳಿದಿದ್ದರು. ಹಿಂದಿ ಬಾರದ ನಾನು ಮಗನ ನೆರವಿನಿಂದ ಅಷ್ಟೋ ಇಷ್ಟೋ